Reg.No. : 22470/1961 Dt.: 7-7-1961 RBI Lic. No. UBD-KAN-1463-P Dt:5-9-1997

# ದಿ ಆರೂಢ ಕೋ - ಅಪರೇಟಿವ್ ಬ್ಯಾಂಕ ಲಿಮಿಟೆಡ್, ಗದಗ.

ಪ್ರಧಾನ ಕಛೇರಿ : ಸರ್. ಎಂ. ವಿಶ್ವೇಶ್ವರಯ್ಯ ರಸ್ತೆ, ಗಂಗಾಪೂರಪೇಟ, ಗದಗ-582101
☎ : ಕಛೇರಿ 08372-238518, ಮ್ಯಾನೇಜರ : 234124, ಶಾಖೆ : 231286

## ವಾರ್ಷಿಕ ಸಾಧಾರಣ ಸಭೆಯ ನೋಟಿಸು

ಮಾನ್ಯ ಸದಸ್ಯರೇ,

ಬ್ಯಾಂಕಿನ ಸನ್ 2021–22ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ **ಶ್ರೀ ಸರಫ್‌ರಾಜ ಅಹ್ಮದ ಎಸ್. ಉಮಚಗಿ** ಇವರ ಅಧ್ಯಕ್ಷತೆಯಲ್ಲಿ **ದಿನಾಂಕ 28–8–2022ನೇ ರವಿವಾರ ಮುಂಜಾನೆ 11–00 ಘಂಟೆಗೆ** ಬ್ಯಾಂಕಿನ ಆವರಣದಲ್ಲಿ ಸರ್. ಎಂ. ವಿಶ್ವೇಶ್ವರಯ್ಯ ರಸ್ತೆ, ಗಂಗಾಪೂರಪೇಟ, ಗದಗದಲ್ಲಿ ಕರೆಯಲಾಗಿದೆ. ಕಾರಣ ಸದಸ್ಯರುಗಳು ಸಮಯಕ್ಕೆ ಸರಿಯಾಗಿ ಸಭೆಗೆ ಹಾಜರಾಗಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

**ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು :**

1. 61ನೇ ಸರ್ವ ಸದಸ್ಯರ ಮಹಾಸಭೆಯ ನೋಟೀಸು ಓದಿ ದಾಖಲ ಮಾಡುವುದು.
2. ಹಿಂದಿನ ಸಭೆಯ ಗೊತ್ತುವಳಿಗಳನ್ನು ಓದಿ ದೃಢೀಕರಿಸುವುದು.
3. ಮಂಡಳಿಯು ಸಲ್ಲಿಸಿದ ವಾರ್ಷಿಕ ವರದಿಯ ಪರಿಗಣನೆ.
4. ಲೆಕ್ಕಪರಿಶೋಧಕರ ನೇಮಕ.
5. ಲೆಕ್ಕ ಪರಿಶೋಧನಾ ವರದಿ ಮತ್ತು ಪರಿಶೋಧಿತ ಲೆಕ್ಕಗಳ ಪರಿಗಣನೆ.
6. ಲೆಕ್ಕಪರಿಶೋಧನಾ ವರದಿಯ ಪಾಲನಾ ವರದಿಯ ಪರಿಗಣನೆ.
7. ನಿವ್ವಳ ಲಾಭ ವಿಲೆ ಮಾಡುವುದು.
8. ಕಾರ್ಯಾಚರಣೆಯ ಕೊರತೆ ಏನಾದರೂ ಇದ್ದಲ್ಲಿ ಅದರ ಪುನರವಲೋಕನ.
9. ರಿಜರ್ವ ಬ್ಯಾಂಕಿನ ಸುತ್ತೋಲೆ ಪ್ರಕಾರ ಮ್ಯಾನೇಜಿಂಗ್ ಡೈರೆಕ್ಟರ (ವ್ಯವಸ್ಥಾಪಕ ನಿರ್ದೇಶಕ) ನೇಮಕ ಮಾಡಿದ್ದನ್ನು ಪರಿಶೀಲಿಸುವುದು.
10. ವಾರ್ಷಿಕ ಕಾರ್ಯಾಚರಣೆಯ ಯೋಜನೆ ಅನುಮೋದನೆ.
11. 2021–22ನೇ ಸಾಲಿನ ಪರಿಷ್ಕೃತ ಹಾಗೂ 2022–23ನೇ ಸಾಲಿನ ವಾರ್ಷಿಕ ಬಜೆಟ್ ಅನುಮೋದನೆ.
12. ಉಪವಿಧಿಯಲ್ಲಿ ನಿರ್ದಿಷ್ಟ ಪಡಿಸಿದ ಮೀಸಲು ಮತ್ತು ಇತರ ನಿಧಿಗಳ ಸೃಜನೆ.
13. ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರವಲೋಕನ.
14. ಮಂಡಳಿಯ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ.
15. ನಿರ್ದೇಶಕ ಮತ್ತು ಅವರ ಸಂಬಂಧಿಗೆ ನೀಡಿದ ಸಾಲದ, ಸುಸ್ತಿ ಸಾಲದ ಮತ್ತು ವಸೂಲಿ ಕ್ರಮದ ಪರಿಶೀಲನೆ.
16. ಇತರೆ ಸಹಕಾರಿಗಳಲ್ಲಿ ಹೊಂದಿರುವ ಸದಸ್ಯತ್ವದ ವರದಿ.
17. ನಿರ್ದೇಶಕರ ಅಥವಾ ಮುಖ್ಯ ಕಾರ್ಯನಿರ್ವಾಹಕನ ಸಂಬಂಧಿಗಳು ನೇಮಕಗೊಂಡಲ್ಲಿ ಆ ಪಟ್ಟಿಯ ಪರಿಗಣನೆ.
18. ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆಯ ಅನುಮೋದನೆ.
19. ಹಿಂದಿನ ವರ್ಷ ಸದಸ್ಯರನ್ನು ಸೇರಿಸಿಕೊಂಡ ಹಾಗೂ ತೆಗೆದು ಹಾಕಿದ ಸಂಕ್ಷಿಪ್ತ ವರದಿ.
20. ಸನ್ 2021–22ನೇ ಸಾಲಿನ ಸಿಬ್ಬಂದಿಗೆ ಎಕ್ಸಗ್ರೇಶಿಯಾ (ಬೋನಸ್) ಕೊಡತಕ್ಕದ್ದು ಅಂತಾ ಅಧಾವೆಯಲ್ಲಿ ತೋರಿಸಿದ್ದು ಮಂಜೂರ ಮಾಡುವುದು.
21. ಉಪವಿಧಿಗಳ ತಿದ್ದುಪಡಿ.
22. ಹಿಂದಿನ ವರ್ಷ ಬಜೆಟ್‌ಗಿಂತ ಹೆಚ್ಚುವರಿ ಅನುಮೋದನೆ ಪಡೆಯುವುದು.
23. ಸಿಬ್ಬಂದಿಗಳ ವೃಂದ ಬಲ ಮತ್ತು ವೇತನ ಶ್ರೇಣಿ ಅನುಮೋದನೆ.
24. ಪ್ರಸ್ತುತ ವರ್ಷದಲ್ಲಿ ವಿತರಿಸಬೇಕಾದ ಶೇರುಗಳ ಸಂಖ್ಯೆ ನಿರ್ಧರಿಸುವುದು.
25. ಸಿಬ್ಬಂದಿ ಸೇವಾ ನಿಯಮಗಳು ಹಾಗೂ ಇತರೆ ವ್ಯವಹಾರ ನಿಯಮಗಳಿಗೆ ಅನುಮೋದನೆ.
26. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.

| | | |
|---|---|---|
| | ಸಹಿ | ಸಹಿ |
| **ಗದಗ** | **ಶ್ರೀ ಎ.ಜಿ.ಯರಗುಡಿ** | **ಜನಾಬ ಸರಫ್‌ರಾಜ ಅಹ್ಮದ.ಎಸ್.ಉಮಚಗಿ** |
| **8–8–2022** | ವ್ಯವಸ್ಥಾಪಕ ನಿರ್ದೇಶಕರು | ಚೇರಮನ್‌ರು |

**ಸೂಚನೆಗಳು :**

1) ಯಾವುದೇ ಶೇರುದಾರರಿಗೆ ಶೇರು ಡಿವ್ಹಿಡೆಂಡ ಕೊಡಲು ಬ್ಯಾಂಕಿನಿಂದ ಪ್ರಕಟಿಸಲ್ಪಟ್ಟ ದಿನಾಂಕದಿಂದ 3 ವರ್ಷದ ಅವಧಿಯ ವರೆಗೆ ಡಿವ್ಹಿಡೆಂಡ ತೆಗೆದುಕೊಳ್ಳದಿದ್ದಲ್ಲಿ ಅಂಥಾ ಡಿವ್ಹಿಡೆಂಡ ಬ್ಯಾಂಕಿನ ರಿಜರ್ವ ಫಂಡಿಗೆ ವರ್ಗಾಯಿಸಲಾಗುವುದು. ಅದರ ಬಗ್ಗೆ ಪ್ರತ್ಯೇಕ ನೋಟಿಸ ಕೊಡಲಾಗುವುದಿಲ್ಲ.
2) ವಾರ್ಷಿಕ ಸಾಧಾರಣ ಸಭೆಯಲ್ಲಿ ಯಾವುದೇ ವಿಷಯಗಳ ಬಗ್ಗೆ ಚರ್ಚೆ ಅಥವಾ ಸಲಹೆ–ಸೂಚನೆ ಕೊಡುವುದಿದ್ದಲ್ಲಿ 5 ದಿನ ಮುಂಚಿತವಾಗಿ ಲಿಖಿತ ರೂಪದಲ್ಲಿ ಮ್ಯಾನೇಜರ ಇವರಿಗೆ ಕೊಡಬಹುದು.
3) ದಿನಾಂಕ 1–4–2021 ರಿಂದ 31–3–2022 ರ ವರೆಗಿನ ಜಮಾ ಖರ್ಚು ಪತ್ರಿಕೆ ಬ್ಯಾಂಕಿನ ನೋಟೀಸ ಬೋರ್ಡಿಗೆ ಅಂಟಿಸಲಾಗಿದೆ ಹಾಗೂ ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ..
4) 2021–22ನೇ ವರ್ಷದ ಶಾಸನಬದ್ಧ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿ ಸಲ್ಲಿಸಿದ್ದು ಸದಸ್ಯರ ಪರಿಶೀಲನೆಗೆ ಪ್ರಧಾನ ಕಛೇರಿಯಲ್ಲಿ ಅವಕಾಶ ಕಲ್ಪಿಸಿದೆ.